# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮುಳಬಾಗಿಲು.

## ಪಿ ಸಿ ಆರ್ – 55/2025

ಪಿ.ಡಬ್ಲ್ಯೂ–1

| | | |
|---|---|---|
| ಸಾಕ್ಷಿದಾರರ ಹೆಸರು | : | ನಾರಾಯಣಮ್ಮ |
| ಗಂಡನ ಹೆಸರು | : | ಚಿಕ್ಕಮುನಿಯಪ್ಪ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸಸ್ಥಳ | : | ಎಳಗೊಂಡಹಳ್ಳಿ |

ದಿನಾಂಕಃ 14.05.2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಸತ್ಯಾಪನ ಹೇಳಿಕೆ ಪಿರ್ಯಾದಿದಾರರ ಪರ ಶ್ರೀ ಎಸ್ ಯು ಎಸ್ .,ವಕೀಲರಿಂದ**

ಸಿಂಧು ನನ್ನ ಸೊಸೆಯಾಗಬೇಕು. ದೊಡ್ಡವರ ಮುಖಾಂತರ ಹೆಣ್ಣು ನೋಡಿ ಮಾತನಾಡಿಕೊಂಡು ನಮ್ಮ ಮಗ ಅರುಣ್ ಕುಮಾರ್ ನೊಂದಿಗೆ ದಿ. 27.06.2024 ರಂದು ಕುರುಡುಮಲೆ ದೇವಸ್ಥಾನದಲ್ಲಿ ಮದುವೆ ಮಾಡಿಸಿರುತ್ತೇವೆ. ಹುಡುಗಿಗೆ ಒಳ್ಳೆ ನಡತೆ ಸಂಸ್ಕಾರ ಇರುತ್ತದೆ ಎಂದು ಹೇಳಿ ನಂಬಿಸಿ ಮದುವೆ ಮಾಡಿಕೊಟ್ಟಿರುತ್ತಾರೆ. ಮದುವೆಯನ್ನು ನಮ್ಮ ಖರ್ಚಿನಲ್ಲಿಯೇ ಮಾಡಿಕೊಂಡಿರುತ್ತೇವೆ. ಮದುವೆ ಮಾಡಿಕೊಂಡು ಮನೆಗೆ ಬಂದ ಮೇಲೆ ನನ್ನ ಸೊಸೆ ಒಂದು ದಿನ ಕೂಡ ನನ್ನ ಮಗನೊಂದಿಗೆ ಸಂಸಾರ ಮಾಡಿರುವುದಿಲ್ಲ. ನನ್ನ ಮಗ ನನ್ನ ಸೊಸೆ ಹತ್ತಿರ ಹೋದರೆ ಜಗಳ ಮಾಡುವುದು, ಹೊಡೆಯುವುದು ಮಾಡುತ್ತಿದ್ದಳು.

ನನ್ನ ಸೊಸೆ ಮದುವೆಯಾದ 3 ದಿನಗಳ ಅವಧಿಯಲ್ಲಿ ನಾನು ನಾಗದೇವತೆ ಹಾಗೂ ವಿಷ ಕನ್ಯೆ ನನ್ನನ್ನು ಮುಟ್ಟಿದರೆ ಗಂಡ 6 ತಿಂಗಳಿಗೆ ಸತ್ತು ಹೋಗುತ್ತಾನೆ ಎಂದು ಹೇಳಿ ದೇವರು ಬಂದಂತೆ ನಾಟಕ ಮಾಡಿರುತ್ತಾಳೆ. ಈ ವಿಚಾರ ಅವರ ಮನೆಯವರಿಗೆ ತಿಳಿಸಿ ದೊಡ್ಡವರು ಬಂದು ಮಾತನಾಡಿ ಎಂದು ಹೇಳಿರುತ್ತೇವೆ. ನಂತರ ದೊಡ್ಡವರೆಲ್ಲಾ ಬಂದು ಮಾತನಾಡಿದಾಗ ನನ್ನ ಸೊಸೆ ಅವರನ್ನು ಬೆಂಗಳೂರಿನಲ್ಲಿ ಮನೆ ಮಾಡಿ ಇಡಿ, ಅಲ್ಲಿ ನಾನು ಮಾಡೆಲಿಂಗ್ ಹಾಗೂ ಸಿನಿಮಾದಲ್ಲಿ ನಟಿಸಬೇಕು, ನಾನು ಅತ್ತೆ ಮಾವನೊಂದಿಗೆ ಇರುವುದಿಲ್ಲ ಎಂದು ಹೇಳಿರುತ್ತಾರೆ. ನನ್ನನ್ನು ಬಲವಂತವಾಗಿ ಮುಟ್ಟಿದರೆ ಸೂಸೈಡ್ ಮಾಡಿಕೊಳ್ಳುತ್ತೇನೆಂದು ಹೇಳಿರುತ್ತಾಳೆ. ಆ ದಿನ ತನ್ನ ತಂದೆಯೊಂದಿಗೆ ದೊಡ್ಡವರ ಮುಖಾಂತರ ತವರು ಮನೆಗೆ ಹೋಗಿರುತ್ತಾಳೆ.

ನನ್ನ ಸೊಸೆ ತನ್ನ ತಂದೆಯೊಂದಿಗೆ ತವರು ಮನೆಗೆ ಹೋದ 1 ವರ್ಷಗಳ ನಂತರ ದೊಡ್ಡವರ ಮುಖಾಂತರ ಪಂಚಾಯಿತಿ ಮಾಡಿಸಿ ನಮ್ಮ ಮನೆಗೆ ಅವರ ತಂದೆ ತಾಯಿ ಬಂದು ಬಿಟ್ಟಿರುತ್ತಾರೆ. ನಂತರ ಆಕೆ ಮೊದಲಿನಂತೆ ಗಂಡನೊಂದಿಗೆ ಇರುವುದಿಲ್ಲ ಎಂದು ಜಗಳ ಮಾಡಿ ಪುನಃ ಆಕೆಯ ತವರು ಮನೆಗೆ ಹೋಗಿರುತ್ತಾಳೆ. ನಂತರ ಅವರ ತಂದೆ ತಾಯಿ ನನಗೆ ಫೋನ್ ಕರೆ ಮಾಡಿ ಬೇತಮಂಗಲದ ಬಳಿ ಯಾವುದೋ ದೇವಸ್ಥಾನ ಹೋಮ ಶಾಂತಿ

ಮಾಡಿಸಿದರೆ ಸರಿ ಹೋಗುತ್ತಾಳೆ ನೀವು ಹಾಗೂ ನಿಮ್ಮ ಮಗ ಬನ್ನಿ ಎಂದು ದಿ. 30.09.2025 ರಂದು ಹೇಳಿರುತ್ತಾರೆ. ದಿ. 30.09.2025 ರಂದು ನನ್ನ ಚಿಕ್ಕ ಮಗನ ಬರ್ತಡೇ ಇತ್ತು. ಆ ದಿನ ನಾವು ಬೇತಮಂಗಲಕ್ಕೆ ಹೋಗಿರುತ್ತೇವೆ. ಅಲ್ಲಿಯೂ ಕೂಡ ನನ್ನ ಸೊಸೆ ನನ್ನನ್ನು ಬೆಂಗಳೂರಿನಲ್ಲಿ ಮನೆ ಮಾಡಿ ಇಟ್ಟರೆ ಇರುತ್ತೇನೆ, ಅತ್ತೆ ಮಾವನ ಜೊತೆ ಇರುವುದಿಲ್ಲ ಎಂದು ಹೇಳಿರುತ್ತಾಳೆ.

ನಂತರ ನಾವೆಲ್ಲರೂ ಬೇತಮಂಗಲದಿಂದ ಕಾಂತರಾಜ ಸರ್ಕಲ್ ಗೆ ಬಂದಾಗ ಮೊದಲೇ ಅವರ ಕಡೆಯವರು ಸುಮಾರು 20 ಜನರು ಇದ್ದು ನನಗೆ ಮತ್ತು ನನ್ನ ಮಗನಿಗೆ ಹೊಡೆದಿರುತ್ತಾರೆ. ಚಾಕು ತೆಗೆದುಕೊಂಡು ನಿನ್ನ ನರ ಕಟ್ ಮಾಡುತ್ತೇನೆಂದು ನನ್ನ ಮಗನಿಗೆ ನನ್ನ ಸೊಸೆಯ ತಂದೆ ಪ್ರಾಣ ಬೆದರಿಕೆ ಹಾಕಿರುತ್ತಾನೆ. ನನ್ನ ಸೊಸೆ ನನ್ನ ಮಗನಿಗೆ ಚಪ್ಪಲಿಯಿಂದ ನನ್ನ ಮುಂದೆ ಹೊಡೆದಿರುತ್ತಾಳೆ.

**(ಮುಂದುವರೆದ ಸತ್ಯಾಪನ ಹೇಳಿಕೆಗಾಗಿ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)

ಓ ಹೇಳಿ ಕೇಳಿ ಸರಿ ಇದೆ.

(ಗೌಡ ಜಗದೀಶ ರುದ್ರೆ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಮುಳಬಾಗಿಲು.